ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಚನ್ನಪಟ್ಟಣ

ಸಿ.ಸಿ.ಸಂಖ್ಯೆ: **619/2022**

ಫಿರ್ಯಾದಿದಾರರು : ಎಂ.ಕೆ. ದೊಡ್ಡಿ ಪೊಲೀಸ್ ಠಾಣೆ

-- ವಿರುದ್ಧ--

ಆರೋಪಿತರು : ಎ 1 ಶಿವರಾಜು ಬಿನ್ ಜಯಲಿಂಗ ಹೆಗ್ಗಡೆ,
31 ವರ್ಷ,

ಎ 2 ಕುಮಾರ ಬಿನ್ ದೊಡ್ಡ ಹೆಗ್ಗಡೆ,
38 ವರ್ಷ,

ಎ 3 ಕೃಷ್ಣ ಬಿನ್ ದೊಡ್ಡ ಹೆಗ್ಗಡೆ,
43 ವರ್ಷ.

ಆರೋಪಿ 1 ರಿಂದ 3 ರ ವಾಸ ಃ
ಮುದುಗೆರೆ ಗ್ರಾಮ,
ಮಳೂರು ಹೋಬಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

ದೋಷಾರೋಪಣೆ

ಶ್ರೀ.ವೆಂಕಟೇಶಪ್ಪ ವಿ., ಬಿ.ಎ.,ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಪಟ್ಟಣ.

1. ದಿನಾಂಕ 10.06.2022 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಎಂ.ಕೆ ದೊಡ್ಡಿ ಪೊಲೀಸ್ ಠಾಣಾ ಸರಹದ್ದು, ಮುದುಗೆರೆ ಗ್ರಾಮದಲ್ಲಿ ಚಾಸಾ 2 ರವರು ತಮ್ಮ ನಿವೇಶನವನ್ನು ಇ-ಖಾತೆ ಮಾಡಿಸುವ ಸಲುವಾಗಿ ಪಂಚಾಯ್ತಿಗೆ ಅರ್ಜಿ ನೀಡಿದ್ದು ಪಂಚಾಯ್ತಿ ಸಿಬ್ಬಂದಿಯವರು ಸ್ಥಳ ಪರಿಶೀಲನೆ ಮಾಡುವ ಸಮಯದಲ್ಲಿ ಚಾಸಾ 2 ರವರು ಚಾಸಾ 1 ರವರನ್ನು ಸಾಕ್ಷಿಯಾಗಿರಲು ಕರೆದು ಚಾಸಾ 1 ರವರು ಸ್ಥಳಕ್ಕೆ ಬಂದು ಚಾಸಾ 2 ರವರ ಪರವಾಗಿ ಮಾತನಾಡಿದರು ಎಂದು 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಏಕಾಏಕಿ ಚಾಸಾ 1 ರವರನ್ನು ಕುರಿತು

ಏನೋ ಬೋಳಿ ಮಗನೆ ನೀನು ಅವನ ಪರವಾಗಿ ಹೇಳುತ್ತೀಯಾ ನಿನ್ನನ್ನು ಯಾರು ಇಲ್ಲಿ ಕರೆದವರು ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟುಮಾಡಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

2. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ 2 ಮತ್ತು 3 ನೇ ಆರೋಪಿತರು ಚಾಸಾ 1 ರವರನ್ನು ಅಡ್ಡಗಟ್ಟಿರುತ್ತೀರಿ. ಆದಕಾರಣ ನೀವು ಭಾರತೀಯ ದಂಡ ಸಂಹಿತೆ ಕಲಂ.341 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

3. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ 1 ನೇ ಅರೋಪಿಯಾದ ನೀವು ತಮ್ಮ ಕೈಗಳಿಂದ ಚಾಸಾ 1 ರವರ ಎಡಕಣ್ಣಿನ ಮೇಲ್ಭಾಗಕ್ಕೆ ಗುದ್ದಿ ನೋವುಂಟು ಮಾಡಿರುತ್ತೀರಿ. ಆದಕಾರಣ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

4. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಇನ್ನೊಂದು ಬಾರಿ ಈ ಜಾಗದ ವಿಚಾರಕ್ಕೆ ಬಂದರೆ ನಿನಗೊಂದು ಗತಿಯನ್ನು ಕಾಣಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

(ಈ ಮೇಲಿನ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ

(ವೆಂಕಟೇಶಪ್ಪ ವಿ.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.

ಚನ್ನಪಟ್ಟಣ.

ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಚನ್ನಪಟ್ಟಣ

ಸಿ.ಸಿ. ಸಂಖ್ಯೆ: **619/2022**

ಪಿರ್ಯಾದುದಾರರು - ವಿರುದ್ಧ - ಆರೋಪಿತ

ಎಂ.ಕೆ.ದೊಡ್ಡಿ ಪೊಲೀಸ್ ಠಾಣೆ ಎ 1. ಶಿವರಾಜು ಬಿನ್ ಜಯಲಿಂಗ ಹೆಗ್ಗಡೆ

ಆರೋಪಿಯ ಹೇಳಿಕೆ

ಪ್ರಶ್ನೆ:1. ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಗಳನ್ನು ಕೇಳಿ ಅರ್ಥಮಾಡಿಕೊಂಡಿರುವಿರಾ?

ಉತ್ತರ: ಎ 1.

ಪ್ರಶ್ನೆ:2. ನೀವು ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಚಿಸುವಿರಾ ಅಥವಾ ನ್ಯಾಯಾಲಯದ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರ: ಎ 1.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ದೋಷ ವಾದಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತರು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ಧೃಢೀಕರಿಸುತ್ತೇನೆ.)

ದಿನಾಂಕ:

(ವೆಂಕಟೇಶಪ್ಪ ವಿ.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.
ಚನ್ನಪಟ್ಟಣ.

ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಚನ್ನಪಟ್ಟಣ

ಸಿ.ಸಿ. ಸಂಖ್ಯೆ: 619/2022

ಪಿರ್ಯಾದುದಾರರು - ವಿರುದ್ಧ - ಆರೋಪಿತ
ಎಂ.ಕೆ.ದೊಡ್ಡಿ ಪೊಲೀಸ್ ಠಾಣೆ ಎ 2-ಕುಮಾರ ಬಿನ್ ದೊಡ್ಡ ಹೆಗ್ಗಡೆ

ಆರೋಪಿಯ ಹೇಳಿಕೆ

ಪ್ರಶ್ನೆ:1. ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಗಳನ್ನು ಕೇಳಿ ಅರ್ಥಮಾಡಿಕೊಂಡಿರುವಿರಾ?

ಉತ್ತರ: ಎ 2.

ಪ್ರಶ್ನೆ:2. ನೀವು ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಚಿಸುವಿರಾ ಅಥವಾ ನ್ಯಾಯಾಲಯದ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರ: ಎ 2.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ದೋಷ ವಾದಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತರು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ಧೃಢೀಕರಿಸುತ್ತೇನೆ.)

ದಿನಾಂಕ:

(ವೆಂಕಟೇಶಪ್ಪ ವಿ.)
ಹಿರಿಯ ಸಿವಿಲ್
ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಚನ್ನಪಟ್ಟಣ.

ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಚನ್ನಪಟ್ಟಣ

ಸಿ.ಸಿ. ಸಂಖ್ಯೆ: 619/2022

ಪಿರ್ಯಾದುದಾರರು - ವಿರುದ್ಧ - ಆರೋಪಿತ
ಎಂ.ಕೆ.ದೊಡ್ಡಿ ಪೊಲೀಸ್ ಠಾಣೆ ಎ 3- ಕೃಷ್ಣ ಬಿನ್ ದೊಡ್ಡ ಹೆಗ್ಗಡೆ

ಆರೋಪಿಯ ಹೇಳಿಕೆ

ಪ್ರಶ್ನೆ:1. ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಗಳನ್ನು ಕೇಳಿ ಅರ್ಥಮಾಡಿಕೊಂಡಿರುವಿರಾ?

ಉತ್ತರ: ಎ 3.

ಪ್ರಶ್ನೆ:2. ನೀವು ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಛಿಸುವಿರಾ ಅಥವಾ ನ್ಯಾಯಾಲಯದ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರ: ಎ 3.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ದೋಷ ವಾದಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತರು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ಧೃಢೀಕರಿಸುತ್ತೇನೆ.)

ದಿನಾಂಕ:

(ವೆಂಕಟೇಶಪ್ಪ ವಿ.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಚನ್ನಪಟ್ಟಣ.